**ಲಾಟರಿ ಮುಂತಾದ ಯೋಜನೆಗಳಲ್ಲಿ ಭಾಗವಹಿಸುವುದಕ್ಕೆ ಹಣ ರವಾನೆ**
**ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ 2 (ಜುಲೈ 27, 2001)**

**ಭಾರತೀಯ ರಿಸರ್ವ್ ಬ್ಯಾಂಕು**
**ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ**
**ಮುಂಬೈ–400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ–2 ಜುಲೈ 27, 2001

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಾಪಾರಿಗಳಿಗೆ

ಮಾನ್ಯರೇ,

**ಲಾಟರಿ ಮುಂತಾದ ಯೋಜನೆಗಳಲ್ಲಿ ಭಾಗವಹಿಸುವುದಕ್ಕೆ ಹಣ ರವಾನೆ**

ಕೆಲವು ಸಾಗರೋತ್ತರ ಸಂಸ್ಥೆಗಳು ಭಾರತದಲ್ಲಿನ ವ್ಯಕ್ತಿಗಳಿಗೆ ಅವರು ಲಾಟರಿ ಮುಂತಾದವುಗಳಲ್ಲಿ ಬಹುಮಾನಗಳನ್ನು ಗೆದ್ದಿರುವುದಾಗಿ ಮತ್ತು ಶುಲ್ಕವಾಗಿ ಸ್ವಲ್ಪ ಹಣವನ್ನು ಅಮೇರಿಕಾ ಡಾಲರ್‌ಗಳಲ್ಲಿ ಹಣ ರವಾನೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತಿರುವುದು ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂದಿದೆ.

2. ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 381 (ಇ) ದಿನಾಂಕ 3ನೇ ಮೇ 2000ದ ಅನುಸೂಚಿ Iರ ಐಟಂ 3ರ ಕಡೆಗೆ ಅಧಿಕೃತ ವ್ಯಾಪಾರಿಗಳ ಗಮನ ಸೆಳೆಯಲಾಗಿದೆ. ಇದು, ಇತರೆ ವಿಷಯಗಳೊಂದಿಗೆ ಲಾಟರಿ ಟಿಕೆಟ್ಟುಗಳನ್ನು ಖರೀದಿಸುವುದಕ್ಕೆ ಹಣ ಜಮೆ ಮಾಡುವುದನ್ನು ನಿಷೇದಿಸುತ್ತದೆ. ಆದ್ದರಿಂದ, ಲಾಟರಿ ಯೋಜನೆಗಳಲ್ಲಿ ಭಾಗವಹಿಸುವುದಕ್ಕಾಗಿ ಯಾವುದೇ ರೂಪದಲ್ಲಿ ಹಣ ರವಾನೆ ಮಾಡುವುದನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999ರ ಅಡಿಯಲ್ಲಿ ನಿಷೇದಿಸಲಾಗಿದೆ ಎಂದು ಸಾರ್ವಜನಿಕರಿಗೆ ಸೂಕ್ತವಾಗಿ ತಿಳಿಸುವಂತೆ ಅಧಿಕೃತ ವ್ಯಾಪಾರಿಗಳಿಗೆ ಸಲಹೆ ಮಾಡಲಾಗಿದೆ. ಅಲ್ಲದೆ, ಈ ನಿರ್ಬಂಧಗಳು ಹಣ ಪರಿಚಲನೆ ಯೋಜನೆಯಂಥ ವಿವಿಧ ಯೋಜನೆಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಾಟರಿಯಂತಹ ಯೋಜನೆಗಳಲ್ಲಿ ಭಾಗವಹಿಸುವುದಕ್ಕಾಗಿ ಹಣ ರವಾನೆಗಳಿಗೆ ಅಥವ ಬಹುಮಾನದ ಹಣ/ಪಾರಿತೋಷಕಗಳು ಮುಂತಾದವುಗಳನ್ನು ಪಡೆಯುವ ಉದ್ದೇಶಕ್ಕಾಗಿ ಮಾಡುವ ಹಣ ರವಾನೆಗಳಿಗೆ ಸಹಾ ಅನ್ವಯವಾಗುತ್ತವೆ.

3. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ಅಧಿನಿಯಮ, 1999ರ (1999ರ 42) 10(4) ನೇ ಪ್ರಕರಣ ಮತ್ತು 11(1) ನೇ ಪ್ರಕರಣದ ಅಡಿಯಲ್ಲಿ ನೀಡಲಾಗಿದೆ. ಈ ನಿರ್ದೇಶನಗಳನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದರೆ ಮತ್ತು ಈ ನಿರ್ದೇಶನಗಳನ್ನು ಪಾಲಿಸದಿದ್ದರೆ ಅಧಿನಿಯಮದ ಅಡಿಯಲ್ಲಿ ಗೊತ್ತುಪಡಿಸಿರುವ ದಂಡಗಳಿಗೆ ಒಳಗಾಗಬೇಕಾಗುತ್ತದೆ.

ತಮ್ಮ ವಿಶ್ವಾಸಿ,

ಕೆ.ಜೆ. ಉದೇಶಿ,
ಮುಖ್ಯ ಪ್ರಧಾನ ವ್ಯವಸ್ಥಾಪಕ.